# ಸಮರ್ಪಿತ ಜೀವನ

## ಫರೀದಪುರದ ವೈದ್ಯ ಮಹಾಶಯರು

ಮೂಲ ಹಿಂದೀ: **ಸ್ವಾಮಿ ಜಪಾನಂದ**

ಕನ್ನಡಕ್ಕೆ : **ರೂಪಶ್ರೀ ನಾಗರಾಜ್**

**ಫ**ರೀದಪುರ, ಬಂಗಾಳದ ಒಂದು ಸಣ್ಣ ಸುಂದರ ಸ್ವಚ್ಛ ನಗರ (ಈಗ ಬಾಂಗ್ಲಾದೇಶದಲ್ಲಿದೆ). ಬಂಗಾಳ ವಿಭಜನೆಯ ವಿರೋಧದಲ್ಲಿ ಆಂದೋಲನವಾದಾಗ ಫರೀದಪುರ ನಿವಾಸಿಗಳೂ ಉತ್ಸಾಹಿತರಾಗಿ ಭಾಗವಹಿಸಿ, ಬ್ರಿಟಿಷ್ ಸರ್ಕಾರಕ್ಕೆ ಸಾಕಷ್ಟು ಗೊಂದಲವನ್ನುಂಟುಮಾಡಿದ್ದರು. ದೊಡ್ಡ ದೊಡ್ಡ ವಿದ್ವಾಂಸರು ಮತ್ತು ಮಾತೃಭೂಮಿಯ ಸೇವೆಯಲ್ಲಿ ಎಲ್ಲವನ್ನೂ ಸಮರ್ಪಿಸಿದ ಬಹಳಷ್ಟು ಮಂದಿ ಇಲ್ಲಿ ಜನ್ಮ ತಾಳಿದ್ದಾರೆ, ಅವರಿಂದ ಬಂಗಾಳದ ಗೌರವವೂ ಹೆಚ್ಚಿದೆ.

೧೯೨೩ರಲ್ಲಿ ವಿಶೇಷ ಆಮಂತ್ರಣ ಪಡೆದು ಪರಿವ್ರಾಜಕ ಸಂನ್ಯಾಸಿಯು ಒಮ್ಮೆ ಫರೀದಪುರಕ್ಕೆ ಹೋಗಿದ್ದ ಮತ್ತು ಒಂದು ಆಶ್ರಮದಲ್ಲಿ ಕೆಲವು ದಿನಗಳ ಕಾಲ ತಂಗಿದ್ದ. ಆ ಆಶ್ರಮದ ಎದುರಿನ ರಸ್ತೆಯ ಬದಿಯಲ್ಲಿ ಒಂದು ಮೈದಾನವಿತ್ತು. ಅದರ ಅಂಚಿಗೆ ಒಂದು ಬಹಳ ದೊಡ್ಡ ಮನೆ, ಬಂಗಾಳದ ಖಾಸಾ ವಿಶೇಷತೆಯೊಂದಿಗೆ, ಮೇಲಿನ ಹೊದಿಕೆ ಹುಲ್ಲಿನಿಂದ ಸುಂದರವಾಗಿ ಹೊದ್ದಿಸಿಕೊಂಡಂತೆ, ಮಣ್ಣಿನದಾದರೂ ಅತ್ಯಂತ ಭವ್ಯವಾಗಿತ್ತು. ಆ ಮನೆಯ ಮಾಲಿಕರು ಒಬ್ಬ ವೈದ್ಯರಾಜರು.

ವೈದ್ಯರಾಜರು ಅತಿ ಸೌಮ್ಯ ಸ್ವಭಾವದವರೂ, ವಿನಯವಂತರೂ ಭಕ್ತಿ ಶ್ರದ್ಧಾಳುವೂ ಆಗಿದ್ದರು. ಅವರ ಪತ್ನಿ ಸುಲಕ್ಷಣೆ, ಸಾತ್ವಿಕಳು ಮತ್ತು ಸುಶೀಲಳು. ಇಬ್ಬರ ಆರೋಗ್ಯವೂ ಚೆನ್ನಾಗಿತ್ತು. ೧೩ ವರ್ಷದ ಒಬ್ಬಳು ಮಗಳು ಮತ್ತು ಎಂಟು ವರ್ಷದ ಒಬ್ಬ ಮಗ ಇದ್ದರು. ಮುಖದ ಚಹರೆಗಳಿಂದ ಅವರೆಲ್ಲ ಉಚ್ಚ ಕುಲದವರಂತೆಯೇ ಕಾಣುತ್ತಿದ್ದರು. ಇಬ್ಬರೂ ಆರೋಗ್ಯವಂತರಾಗಿ ಸುಂದರವಾಗಿ ಚಿತ್ತಾಕರ್ಷಕರಾಗಿದ್ದರು.

ಪರಿವ್ರಾಜಕನು ಫರೀದಪುರ ತಲುಪಿದ ಕೂಡಲೇ ವೈದ್ಯರು ಬಂದು ತಮ್ಮ ಪರಿಚಯವನ್ನು ಹೇಳಿಕೊಂಡು, ಪ್ರತಿದಿನ ಸತ್ಸಂಗಕ್ಕೆ ಬರುವೆನೆಂದು ಹೇಳಿ ಹೋದರು. ಅದರ ನಂತರ ಅವರು ಪ್ರತಿದಿನವೂ ಬರಲು ಆರಂಭಿಸಿದರು ಮತ್ತು ಪ್ರೀತಿಯಿಂದ, ಆಸಕ್ತಿಯಿಂದ ವಿವಿಧ ಧಾರ್ಮಿಕ ಚರ್ಚೆಗಳಲ್ಲಿ ಭಾಗವಹಿಸತೊಡಗಿದರು.

ಸುಮಾರು ಒಂದು ತಿಂಗಳು ಕಳೆದಿತ್ತು. ಒಂದು ದಿನ ಸಂನ್ಯಾಸಿಯು, ವೈದ್ಯರ ಇಬ್ಬರು ಮಕ್ಕಳೂ ಆಶ್ರಮದ ಹತ್ತಿರದ ಒಂದು ವಿಶಾಲವಾದ ಮಾವಿನ ಮರದ ನೆರಳಿನಲ್ಲಿ ಆಟವಾಡುತ್ತಿದ್ದುದನ್ನು ನೋಡಿದ. ಬೆಳಿಗ್ಗೆ ಒಂಬತ್ತು ಒಂಬತ್ತೂವರೆ ಇರಬಹುದು. ಮಧ್ಯಾಹ್ನ ಎರಡು ಗಂಟೆಯ ಹೊತ್ತಿಗೆ ನೋಡಿದಾಗಲೂ ಇಬ್ಬರೂ ಅಲ್ಲೇ ಇದ್ದರು. ಆಗ ಹುಡುಗಿಯನ್ನು ಕರೆದು ಕೇಳಿದ, ''ಯಾಕೆ ಇಲ್ಲಿಯೇ ಇದ್ದೀರಲ್ಲ, ಏನು ಸಮಾಚಾರ? ಊಟಕ್ಕೆ ಹೋಗಲಿಲ್ಲವೆ?'' ಹುಡುಗಿಯು ತಲೆತಗ್ಗಿಸಿ ನಿಂತಿದ್ದಳು. ಆಗ ಹುಡುಗನೂ ಅಲ್ಲಿಗೆ ಬಂದ. ಅವನ ಮುಖವಂತೂ ಹಸಿವಿನಿಂದ ಒಣಗಿದಂತೆ ಕಾಣುತ್ತಿತ್ತು. ''ಯಾಕೆ ಮಗು, ಇವತ್ತು ಅಮ್ಮ ನಿಮಗೆ ಊಟ ನೀಡಲಿಲ್ಲವೆ?'' ಉತ್ತರ ಬರಲಿಲ್ಲ. ಆಗ ಸನ್ಯಾಸಿಯು ಅವರನ್ನು ಕರೆದುಕೊಂಡು ಹೋದ ಮತ್ತು ತಿನ್ನಲು ಚೆನ್ನಾಗಿ ಕಳಿತ ಬಾಳೆಹಣ್ಣು ಮತ್ತು ಕಾಳುಗಳನ್ನು ಕೊಟ್ಟ. ವೈದ್ಯರಾಜರು ಸಿಕ್ಕಿದಾಗ ಚಿಕ್ಕ ಮಕ್ಕಳನ್ನು ಇಷ್ಟು ಹೊತ್ತಿನವರೆಗೂ ಹಸಿವಿನಲ್ಲಿ ಬಿಡಲು ಏನು ಕಾರಣ ಎಂದು ಕೇಳಬೇಕೆಂದು ಮನಸ್ಸಿನಲ್ಲಿಯೇ ಅಂದುಕೊಂಡ.

ವೈದ್ಯರಾಜರು ಮನೆಯಲ್ಲಿ ಇದ್ದರು. ಅಲ್ಲಿಂದಲೇ ಮಕ್ಕಳು ಏನನ್ನೋ ತಿನ್ನುತ್ತಿರುವುದನ್ನು ನೋಡಿದರು. ಅವರು ನಿಧಾನವಾಗಿ ಆಶ್ರಮದೊಳಗೆ ಬಂದರು. ಮಕ್ಕಳು ಅವರನ್ನು ನೋಡುತ್ತಲೇ ಹೆದರಿಬಿಟ್ಟರು. ಆದರೆ ಸಂನ್ಯಾಸಿಯ ಆಶ್ವಾಸನೆ ದೊರೆತು, ತಿಂದದ್ದನ್ನು ಮುಗಿಸಿ ಮತ್ತೆ ಮಾವಿನ ಮರದ ಕೆಳಗೆ ಆಡಲು ಹೋದರು.

''ಏಕೆ ವೈದ್ಯರಾಜರೇ... ಏನು ವಿಷಯ? ಇವತ್ತು ಇನ್ನೂ ಅಡುಗೆ ಆಗಿಲ್ಲವೆ? ಮಕ್ಕಳು ಹಸಿದಿದ್ದಾರೆಯೆ? ''

ವೈದ್ಯರಾಜರು ತಮ್ಮ ದೃಷ್ಟಿಯನ್ನು ನೆಲದ ಮೇಲಿಟ್ಟು ಶಾಂತವಾಗಿ ಕುಳಿತುಬಿಟ್ಟರು. ಸ್ವಲ್ಪ ಹೊತ್ತು ಮೌನವಾಗಿಯೇ ಇದ್ದರು, ನಂತರ ಹೇಳಿದರು: ''ಈಗ ನಿಮ್ಮಿಂದ ಮುಚ್ಚಿಡುವುದು ಏನಿದೆ ಸ್ವಾಮೀಜಿ? ಹಾಂ, ಇವತ್ತು ಅಡಿಗೆ ಆಗಿಲ್ಲ. ಮನೆಯಲ್ಲಿ ಏನೂ ಇಲ್ಲ. ಆದರೆ ಸಂಜೆ ಹೊತ್ತಿಗೆ ಅವನು (ಪರಮೇಶ್ವರ) ಖಂಡಿತ ನೀಡುತ್ತಾನೆ, ಯಾವಾಗಲೂ ನೀಡುತ್ತಾನೆ. ಇಲ್ಲಿಯವರೆಗೆ ಒಂದು ದಿನವೂ ಉಪವಾಸ ಇದ್ದದ್ದಿಲ್ಲ. ಅವನ ಕೃಪೆಯಿಂದ ಖಂಡಿತ ದೊರಕುತ್ತದೆ.''

''ಆದರೆ ವೈದ್ಯರೇ, ಕನಿಷ್ಠ ಮಕ್ಕಳನ್ನಾದರೂ, ಒಂದು ವೇಳೆ ನಿಮ್ಮ ಸಂಬಂಧಿಕರು ಯಾರೂ ಇಲ್ಲದಿದ್ದರೆ, ನನ್ನ ಹತ್ತಿರವಾದರೂ ಕಳಿಸಬಹುದಿತ್ತಲ್ಲ?''

''ಇಲ್ಲ ಸ್ವಾಮೀಜಿ.. ಅಮ್ಮ ಒಲೆ ಹಚ್ಚಿಲ್ಲ ಎಂದು ಗೊತ್ತಾದ ಕೂಡಲೇ ಮಕ್ಕಳು ಗ್ರಹಿಸುತ್ತಾರೆ, ಮನೆಯಲ್ಲಿ ಅನ್ನವಿಲ್ಲ ಎಂದು. ಸುಮ್ಮನೆ ಹೊರಗೆ ಬಂದು ಹೆಚ್ಚಿನಂಶ ಈ ಜಾಗದಲ್ಲೇ ಆಡುತ್ತಿರುತ್ತಾರೆ. ಅವರ ಅಮ್ಮ ಅವರನ್ನು ಕರೆಯುವವರೆಗೂ ಅವರು ಬೇರೆಲ್ಲಿಗೂ ಹೋಗದೆ ಇಲ್ಲೇ ಆಡುತ್ತಾರೆ. ಬೇರೆ ದಿನಗಳಲ್ಲಾದರೆ ಕಾಡಿನ ಗೆಡ್ಡೆ, ಎಲೆಗಳನ್ನು ತಂದು ಉಪ್ಪಿನೊಂದಿಗೆ ಬೆರೆಸಿ ಕೊಡುತ್ತಾಳೆ. ಆದರೆ ಇಂದು ಅದೂ ಕೂಡ ಸಿಗಲಿಲ್ಲ. ಭಾರೀ ಮಳೆಯಿಂದ

ಪ್ರವಾಹ ಬಂದು ತಿನ್ನಲು ಯೋಗ್ಯವಾದ ಕಾಡಿನ ಗೆಡ್ಡೆ ಎಲೆಗಳೆಲ್ಲ ಕೊಚ್ಚಿಕೊಂಡು ಹೋಗಿವೆ. ಇದೇ ಕಾರಣದಿಂದ ಇಲ್ಲಿಯವರೆಗೆ ಏನೂ ಕೊಡಲಾಗಲಿಲ್ಲ. ಆದರೆ ಸ್ವಾಮೀಜಿ, ಸಂಜೆಯೊಳಗೆ ಆ ಪರಮೇಶ್ವರ ಖಂಡಿತ ಕೊಡುತ್ತಾನೆ. ಯಾವಾಗಲೂ ಕೊಡುತ್ತಾನೆ..'' ಅಷ್ಟರಲ್ಲಿ ಒಬ್ಬ ಮುಸಲ್ಮಾನನು ವೈದ್ಯರಾಜರನ್ನು ಕರೆಯಲು ಬಂದ ಮತ್ತು, ''ಬೇಗ ಬನ್ನಿ, ಮನೆಯಲ್ಲಿ ಏನೋ ತೊಂದರೆ ಆಗಿದೆ'' ಎಂದ. ವೈದ್ಯರಾಜರು ಸಂನ್ಯಾಸಿಗೆ ವಿದಾಯ ಹೇಳಿ ಅವನೊಂದಿಗೆ ಹೊರಟು ಹೋದರು. ಸಂಜೆ ಬಂದಾಗ ಅಕ್ಕಿ ಮುಂತಾದ ಆವಶ್ಯಕ ಸಾಮಾನುಗಳನ್ನು ತೆಗೆದುಕೊಂಡು ಬಂದರು.

ದೂರದಿಂದಲೇ ಸಣ್ಣದೊಂದು ಚೀಲವನ್ನು ತೋರಿಸಿ, ''ಸ್ವಾಮೀಜಿ, ನೀಡಿದ್ದಾನೆ'' ಎಂದು ಕೂಗಿ ಹೇಳಿ ಮನೆಯೊಳಗೆ ಹೋದರು. ಸೂಚ್ಯವಾಗಿ ಎಲ್ಲವನ್ನು ಹೇಳಿಯಾಗಿತ್ತು ಅವರು.

ವೈದ್ಯರಾಜರ ಪರಮಶ್ರದ್ಧೆ, ಅಚಲ ವಿಶ್ವಾಸ ಮತ್ತು ಶರಣಾಗತಿಯ ದೃಢ ಭಾವನೆಯನ್ನು ನೋಡಿ ಸಂನ್ಯಾಸಿಯು ಮಂತ್ರ ಮುಗ್ಧನಾದ, ಅವನ ಹೃದಯದಲ್ಲಿ ವೈದ್ಯರಾಜರ ಬಗ್ಗೆ ಅತ್ಯಧಿಕ ಶ್ರದ್ಧೆ ಮತ್ತು ಪ್ರೇಮ ಮೂಡಿತು.

ಮನೆಯಲ್ಲಿ ಸಾಮಾನುಗಳನ್ನು ಇಟ್ಟು ವೈದ್ಯರಾಜರು ನಗುನಗುತ್ತ ಬಂದು ಹೇಳಿದರು, ''ನಾನಂತೂ ಹೇಳುತ್ತಲೇ ಇದ್ದೆನಲ್ಲ ಸ್ವಾಮೀಜಿ, ಭಗವಂತ ಸಂಜೆಯ ವೇಳೆಗೆ ಖಂಡಿತಾ ಕೊಡುತ್ತಾನೆ, ಇಲ್ಲಿಯವರೆಗೂ ಉಪವಾಸ ಬಿಟ್ಟಿಲ್ಲ ಎಂದು... ಈ ರೀತಿ ಬಹಳಷ್ಟು ದಿನಗಳು ಆಗಿವೆ. ಮನೆಯಲ್ಲಿ ಒಂದು ಕಾಳು ಕೂಡ ಇರುವುದಿಲ್ಲ. ಆದರೆ ಭಗವಂತ ಬಹಳ ಕೃಪಾಳು. ಅಗತ್ಯವಾದುದನ್ನು ಕೊಟ್ಟೇ ಕೊಡುತ್ತಾನೆ. ಅವನ ಕೃಪೆಯಂತೂ ಅಸೀಮ... ಈ ಮಕ್ಕಳಂತೂ ತಿನ್ನಲು ಬೇಕೆಂದು ಹಟ ಶುರು ಮಾಡಿದರೆ ತಾಯಿ ತಂದೆಯವರ ಮಾನಸಿಕ ಸ್ಥಿತಿ ಹೇಗಿರುತ್ತದೆ ನಿಮಗೆ ಗೊತ್ತೇ ಇದೆ. ಆದರೆ ಇವರಿಬ್ಬರೂ ಸುಮ್ಮನೆ ಹೊರಗೆ ಹೋಗಿ ಆಟವಾಡುತ್ತಿರುತ್ತಾರೆ. ಒಂದೊಂದು ಸಲ ರಾತ್ರಿವರೆಗೂ ಹೊರಗೆ ಇದ್ದು, ಮನೆಗೆ ಬಂದ ಕೂಡಲೇ ಏನನ್ನೂ ಕೇಳುವುದಿಲ್ಲ. ಅಷ್ಟೇ ಅಲ್ಲ, ಅವರು ನಮ್ಮ ಸಂಬಂಧಿಕರ ಮನೆಗೆ ಹೋಗಿ ಅಲ್ಲೂ ಏನನ್ನೂ ಕೇಳುವುದಿಲ್ಲ. ಅವರ ಅಮ್ಮ ಬೇಡವೆಂದು ಹೇಳಿದ್ದಾಳೆ, ಅದಕ್ಕಾಗಿ ಯಾರಿಂದಲೂ ತಿನ್ನಲು ಕೇಳುವುದಿಲ್ಲ. ಆದರೆ ಇವತ್ತು ನನಗಂತೂ ಆಶ್ಚರ್ಯವಾಯಿತು ನಿಮ್ಮಲ್ಲಿ ಬಂದು ತಿಂದರಲ್ಲ ಎಂದು. ನನ್ನ ಮಡದಿ ಯಾವತ್ತೂ 'ನನಗೆ ಇದು ತನ್ನಿ ಅದು ತನ್ನಿ' ಎಂದು ಹೇಳಿಲ್ಲ ಅಥವಾ ಯಾವುದೇ ವಸ್ತುವನ್ನು ಬೇಡಿಲ್ಲ. ಅವಳೇ ಸ್ವತಃ ನೋಡುತ್ತಾಳೆ, ಪೆಟ್ಟಿಗೆಯಲ್ಲಿ ಹಣ ಇದೆಯೋ ಇಲ್ಲವೋ ಎಂದು. ಏನೂ ಇಲ್ಲದಿದ್ದರೆ ಭಗವಂತನ ಸ್ಮರಣೆ ಮಾಡುತ್ತಾ ಸುಮ್ಮನಾಗಿಬಿಡುತ್ತಾಳೆ. ಅವಳ ಕರ್ತವ್ಯವೇನೋ ಅದನ್ನು ಮಾಡುತ್ತಾಳೆ ಅಷ್ಟೇ'' ಎಂದರು.

''ವೈದ್ಯರೇ, ಆ ಮಕ್ಕಳು ಏನೂ ಕೇಳಲಿಲ್ಲ, ನಾನೇ ಅವರನ್ನು ಕರೆದೆ. ನಿಮ್ಮೊಂದಿಗೆ ನನ್ನ ಸಂಬಂಧ ವಿಶೇಷವಾಗಿಯೇ ಇದೆ. ಆದ್ದರಿಂದಲೇ ಅವರು ಸುಮ್ಮನೆ ನಾನು ಕೊಟ್ಟ ಆಹಾರವನ್ನು ಸ್ವೀಕರಿಸಿದರು ಎಂದು ತೋರುತ್ತದೆ.''

''ಹೌದು ಸ್ವಾಮೀಜಿ, ಅವರು ನಿಮ್ಮಲ್ಲಿ ಪ್ರೀತಿ ಇರಿಸಿದ್ದಾರೆ ಎಂಬುದೇ ಅತ್ಯಂತ ಸೌಭಾಗ್ಯದ ವಿಷಯ. ನಿಮ್ಮಿಂದ ಆಹಾರವನ್ನು ತೆಗೆದುಕೊಂಡಿದ್ದಕ್ಕೆ ನನಗಂತೂ ಯಾವುದೇ ತಕರಾರಿಲ್ಲ. ನನಗಂತೂ ಆನಂದದ ವಿಚಾರ.''

''ವೈದ್ಯರೆ, ಒಂದು ಮಾತು.. ಅಕಸ್ಮಾತ್ ಮನೆಯಲ್ಲಿ ಏನೂ ಇಲ್ಲದಿದ್ದಾಗ ಆ ಮನೆಯ ಗೃಹಸ್ಥನೇ ಎಲ್ಲಿಂದಲಾದರೂ ಸಾಲ ತಂದು ಕೆಲಸ ನಡೆಸಬೇಕಾಗುತ್ತದೆ ಅಲ್ಲವೆ?''

''ಹೌದು ಸ್ವಾಮೀಜಿ, ಆದರೆ ಯಾರಿಂದಲೂ ಸಾಲ ತೆಗೆದುಕೊಳ್ಳಬಾರದೆಂದು ನನ್ನ ತಂದೆಯ ಆಣತಿಯಿತ್ತು. ನಾನು ಅವರ ಆದೇಶವನ್ನೇ ಪಾಲಿಸುತ್ತೇನೆ. ಯಾವುದೇ ವಸ್ತುವನ್ನು ಸಾಲ ತೆಗೆದುಕೊಳ್ಳುವುದಿಲ್ಲ. ಆದರೆ ಭಗವಂತ ಸಂಜೆಯ ಹೊತ್ತಿಗೆ ಆಹಾರ ಕೊಡುತ್ತಾನೆ.''

''ವೈದ್ಯರೆ, ನಿಮ್ಮಲ್ಲಿಗೆ ಔಷಧಿ ತೆಗೆದುಕೊಳ್ಳಲು ಬಹಳಷ್ಟು ಜನ ಬರುತ್ತಾರೆ. ಆದರೂ ಈ ಪರಿಸ್ಥಿತಿ?''

''ಹೌದು ಸ್ವಾಮೀಜಿ, ನನ್ನ ಹತ್ತಿರ ಬಹಳಷ್ಟು ಜನ ಬರುತ್ತಾರೆ. ನಾನು ಸಹ ಎಷ್ಟರಮಟ್ಟಿಗೆ ಸಾಧ್ಯವೋ ಅಷ್ಟು ಪ್ರೇಮದಿಂದಲೇ ಸೇವೆಯನ್ನು ಮಾಡುತ್ತೇನೆ. ನನ್ನ ಹತ್ತಿರವಿದ್ದ ಔಷಧಿ ಇದ್ದರೆ ಕೊಡುತ್ತೇನೆ, ಇಲ್ಲದಿದ್ದರೆ ಚೀಟಿಯಲ್ಲಿ ಬರೆದು ಕೊಡುತ್ತೇನೆ ಅವರು ಬಜಾರಿನಿಂದ ಕೊಂಡುಕೊಳ್ಳುತ್ತಾರೆ. ನನ್ನ ಪೂಜ್ಯ ತಂದೆಯ ಆದೇಶವಿತ್ತು, ಯಾವುದೇ ಔಷಧಿಗಾಗಲಿ ಅಥವಾ ರೋಗಿಯ ಮನೆಯ ಭೇಟಿಯಾಗಲಿ, ದುಡ್ಡನ್ನು ತೆಗೆದುಕೊಳ್ಳಬಾರದೆಂದು. ನಾನು ಅದನ್ನು ಪಾಲಿಸುತ್ತೇನೆ. ಹಾಗಾಗಿ ಅವರು ಕೇಳಿದಾಗ ನಾನು ಒಂದಷ್ಟು ನಿರ್ದಿಷ್ಟ ಬೆಲೆ ಹೇಳುತ್ತೇನೆ. ಅವರೆಷ್ಟು ಕೊಡುತ್ತಾರೋ ಅಷ್ಟನ್ನು ತೆಗೆದು ಕೊಳ್ಳುತ್ತೇನೆ. ಹೆಚ್ಚಿನ ಅಂಶ ಜನರು ಕಡಿಮೆ ಕೊಡುತ್ತಾರೆ, ಈಶ್ವರನ ಇಚ್ಛೆ, ಭೇಟಿಯಲ್ಲೂ ಈ ನಿಯಮವನ್ನು ಪಾಲಿಸುತ್ತೇನೆ. ಎರಡು ರೂಪಾಯಿ ಅಂತ ನಿಗದಿಪಡಿಸಿದ್ದೇನೆ ಆದರೆ ಎಷ್ಟು ಕೊಡುತ್ತಾರೋ ಅಷ್ಟು ತೆಗೆದುಕೊಳ್ಳುತ್ತೇನೆ, ಕೊಡದಿದ್ದರೂ ಕೇಳುವುದಿಲ್ಲ.''

''ಬಹಳ ಒಳ್ಳೆಯದು ವೈದ್ಯರೇ, ಆದರೆ ನೀವು ಲೆಕ್ಕ ಬರೆದಿಡುತ್ತಿದ್ದೀರೋ ಇಲ್ಲವೋ? ಏಕೆಂದರೆ ಬಹಳ ದಿನಗಳ ನಂತರ ಎಷ್ಟು ದುಡ್ಡು ಎಂದು ಯಾರಾದರೂ ಕೇಳಿದರೆ ಆಗ ನೆನಪಿಡಲು ಕಷ್ಟವಾಗುತ್ತದೆ.''

''ಹಾಂ, ಹೌದು ಸರಿಯಾಗಿ ಲೆಕ್ಕವನ್ನೆಲ್ಲ ಬರೆದಿಡುತ್ತೇನೆ, ಕೇಳಿದ ಕೂಡಲೇ ಒಂದೇ ನಿಮಿಷದಲ್ಲಿ ಹೇಳಿಬಿಡುತ್ತೇನೆ.''

''ವಾಹ್.. ಹಾಗಾದರೆ ಏನೂ ತೊಂದರೆ ಇಲ್ಲದಿದ್ದರೆ ನನಗೆ ಕೊಂಚ ತೋರಿಸುತ್ತೀರಾ?''

ವೈದ್ಯರು (ಸ್ವಲ್ಪ ಯೋಚಿಸಿ), ''ನಿಮ್ಮ ಮುಂದೆ ಯಾವುದೇ ಗುಟ್ಟಿಲ್ಲ ಸ್ವಾಮೀಜಿ'' ಎಂದು ಹೇಳಿ ಹೋಗಿ ಲೆಕ್ಕದ ಪುಸ್ತಕವನ್ನು ತಂದರು. ನಿಜಕ್ಕೂ ಲೆಕ್ಕದ ಪುಸ್ತಕ ಸುಂದರವಾಗಿ ಮತ್ತು ಶುದ್ಧ ವಾಗಿ

ಬರೆಯಲಾಗಿತ್ತು. ಹೆಸರು, ತಾರೀಕು, ಔಷಧಿ, ಬೆಲೆ, ವಸೂಲಿಯಾಗಿದ್ದು, ಬಾಕಿ ಇರುವುದು, ರೋಗದ ವಿವರ, ಭೇಟಿಯ ಸಮಯ, ತಾರೀಕು, ಇತ್ಯಾದಿ ಎಲ್ಲವೂ ಇತ್ತು.

ಅದರಲ್ಲಿ ಆಶ್ರಮದೊಂದಿಗೆ ಸಂಬಂಧ ಹೊಂದಿದ್ದ ಒಂದು ಮೂರು ಜನ ಸಜ್ಜನರ ಹೆಸರುಗಳು ಇದ್ದವು. ಸಂನ್ಯಾಸಿಗೆ ತಕ್ಷಣ ಏನೋ ಹೊಳೆದು ನೋಡಿದಾಗ ಬಾಕಿ ಬರಬೇಕಾಗಿದ್ದುದು ಸಾವಿರ, ಒಂದೂವರೆ ಸಾವಿರಕ್ಕಂತೂ ಕಮ್ಮಿ ಇರಲಿಲ್ಲ. ಹಾಗೇ ಮತ್ತಷ್ಟು ಸಜ್ಜನರಿದ್ದರು. ವರ್ಷಾನುಗಟ್ಟಲೆಯಿಂದ ಇದಕ್ಕೆ ಮುಖ್ಯ ಕಾರಣ, ವೈದ್ಯರಾಜರು ತಾವಾಗಿಯೇ ಕೇಳುವುದಿಲ್ಲ, ಬಿಲ್ಲನ್ನೂ ಕೊಡುವುದಿಲ್ಲ ಮತ್ತು ಎಲ್ಲರಿಗೂ ಮನೆಯವರಂತೆ ಆಗಿಬಿಟ್ಟಿದ್ದರು. ಹಾಗಾಗಿ ನಮ್ಮವರಿಗೆ ಕೊಡಬೇಕೆಂದು ಯಾರಾದರೂ ಹೇಗೆ ಯೋಚಿಸುವುದು?

ವೈದ್ಯರ ಮನೆಯಿಂದ ಕರೆ ಬಂತು, ಅಡುಗೆ ತಯಾರಾಗಿತ್ತು. ನಮಸ್ಕಾರ ಹೇಳಿ ಅವರು ಹೊರಟು ಹೋದರು. ಸಂನ್ಯಾಸಿಯು ತಕ್ಷಣ ಆಶ್ರಮದ ಮುಖ್ಯಸ್ಥರನ್ನು ಕರೆದು, ಎಲ್ಲ ಪರಿಸ್ಥಿತಿಯನ್ನು ವಿವರಿಸಿದ ಮತ್ತು ಒಬ್ಬಿಬ್ಬರು ಧನವಂತ ಸಜ್ಜನರನ್ನು ಸಂಪರ್ಕಿಸಿ ಅವರನ್ನು ಕರೆತರಲು ಹೇಳಿದ. ಅವರುಗಳು ಬಂದಾಗ ಸಂನ್ಯಾಸಿಯೇ ಎಲ್ಲ ವಿಷಯಗಳನ್ನೂ ಹೇಳಿ, ಕೇಳಿದ: ''ಸಜ್ಜನರೇ ಈ ವಿಷಯದಲ್ಲಿ ವೈದ್ಯರಂತೂ ಏನು ಹೇಳಿಲ್ಲ, ನಾನೇ ನಿಮ್ಮೊಂದಿಗೆ ಹೇಳುತ್ತಿದ್ದೇನೆ. ಅವರು ತಾವಾಗೇ ಕೇಳುವುದಿಲ್ಲ. ಈ ಕಾರಣದಿಂದಾಗಿ ಮರೆತುಬಿಡುವುದು ಉಚಿತವಲ್ಲ. ಸಮಯಕ್ಕೆ ಸರಿಯಾಗಿ ಹಣ ಕೊಡುವುದೇ ಧರ್ಮ.''

''ಆದರೆ ಸ್ವಾಮೀಜಿ, ವೈದ್ಯರಂತೂ ನಮ್ಮ ಮನೆಯವರಂತೆ ಇದ್ದಾರೆ. ಅವರು ನಮ್ಮೊಂದಿಗೆ ಏನೂ ಹೇಳಲಿಲ್ಲ, ಮತ್ತೆ ನಿಮಗೆ?''

''ನೀವು ಮತ್ತೆ ಮತ್ತೆ ಅದೇ ಮಾತನ್ನೇ ಆಡುತ್ತಿದ್ದೀರಿ. ನಾನಂತೂ ಒಂದು ಮಾತು ಸ್ಪಷ್ಟಪಡಿಸುತ್ತೇನೆ. ವೈದ್ಯರಾಜರು ನನ್ನೊಂದಿಗೆ ಏನನ್ನೂ ಹೇಳಲಿಲ್ಲ. ಅವರು ಬರೆದ ಲೆಕ್ಕ ಪತ್ರವನ್ನು ನೋಡಿದಾಗ ನನಗೆ ಎಲ್ಲ ತಿಳಿಯಿತು. ಅವರ ಆರ್ಥಿಕ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡೇ ನಾನು ನಿಮಗೆ ಹೇಳುತ್ತಿದ್ದೇನೆ. ಇದರಲ್ಲಿ ವೈದ್ಯರನ್ನು ಮಧ್ಯೆ ಎಳೆಯಬೇಡಿ. ನೀವೆಲ್ಲ ಧರ್ಮಭೀರುಗಳು. ಸರಿಯಾದ ಸಮಯಕ್ಕೆ ಸರಿಯಾದ ಬೆಲೆಯನ್ನು ಕೊಡಬೇಕೆನ್ನುವುದು ನಿಮ್ಮೆಲ್ಲರ ನೈತಿಕ ಜವಾಬ್ದಾರಿಯಾಗಿರುತ್ತದೆ. ಅವರು ಕೇಳಲಿ ಬಿಡಲಿ, ಯಾವುದು ಉಚಿತವೋ ಅಥವಾ ಬೆಲೆಯುಳ್ಳದ್ದೋ, ಅದನ್ನು ಸಮಯಕ್ಕೆ ಸರಿಯಾಗಿ ಕೊಟ್ಟು ಬಿಡಬೇಕು.''

ಆ ಸಜ್ಜನರು ಮನೆಗೆ ತೆರಳಿದರು. ಸ್ವಲ್ಪ ಹಣವನ್ನು ಸುಮಾರು ರಾತ್ರಿಯೇ ತಲುಪಿಸಿದರು ಮತ್ತು ಕೆಲವರು ಬೆಳಿಗ್ಗೆ ತಂದು ಕೊಟ್ಟರು. ಎರಡು ದಿನಗಳಲ್ಲಿ ವೈದ್ಯರಾಜರಿಗೆ ಸುಮಾರು ಒಂದೂವರೆ ಸಾವಿರದಷ್ಟು ಹಣ ದೊರಕಿತು, ಅವರಿಗಂತೂ ಇದರ ನಿರೀಕ್ಷೆ ಸ್ವಲ್ಪವೂ ಇರಲಿಲ್ಲ. ಆದರೆ ರಾತ್ರಿ ಹತ್ತರ ನಂತರ ವೈದ್ಯರು ದುಃಖಿಸುತ್ತಾ ಬಂದು ಹೇಳಿದರು, ''ಮಹಾಶಯರೇ, ನೀವು ಇದೇನು ಮಾಡಿದಿರಿ? ಯಾಕೆ ಮಾಡಿದಿರಿ? ನನಗಂತೂ ಬಹಳ ದುಃಖವಾಗುತ್ತಿದೆ. ನಾನು ಏನು ಮಾಡಲು ಸಾಧ್ಯವಿಲ್ಲವೋ ಅದನ್ನು ನೀವು ಮಾಡಿದಿರಿ. ನನ್ನ ಗತಿಯೇನು?'' ಹೀಗೆ ಹೇಳುತ್ತ ದುಃಖಿಸತೊಡಗಿದರು.

''ನೀವಂತೂ ಏನೂ ಹೇಳಿಲ್ಲ, ನಾನೇ ಹೇಳಿದೆ. ಇದರಿಂದ ಏನು ದೋಷವೋ ಪಾಪವೋ ಬಂದಂತಾದರೆ ಅದು ನನ್ನದೇ ಆಗುತ್ತದೆ. ಅವರೆಲ್ಲ ಸಜ್ಜನರು, ಧರ್ಮಭೀರುಗಳು. ಆದರೆ ಕರ್ತವ್ಯದಲ್ಲಿ ನಿರತರಾಗಿಬಿಟ್ಟಿದ್ದರು, ಹಾಗಾಗಿ ಒಬ್ಬ ಸಂನ್ಯಾಸಿ ನೆನಪಿಸಬೇಕಾಯಿತು. ಇದು ಸಂನ್ಯಾಸಿಯ ಕರ್ತವ್ಯವೂ ಹೌದು. ನೀವು ಯಾಕೆ ದುಃಖಿತರಾಗುತ್ತಿದ್ದೀರಿ? ಇದು ನಿಮ್ಮ ಉಚ್ಚ ಸಂಸ್ಕಾರದ ಲಕ್ಷಣವೇ. ನನಗಂತೂ ತುಂಬಾ ಆನಂದವಾಗುತ್ತಿದೆ. ಸಾಮಾನ್ಯವಾಗಿ ಧಾರ್ಮಿಕ ವ್ಯಕ್ತಿಗಳು ಹೀಗೆಯೇ ಇರುತ್ತಾರೆ. ನೀವು ನಿಶ್ಚಿಂತರಾಗಿರಿ. ಈ ಕೆಲಸವನ್ನು ನೀವು ಮಾಡಿಲ್ಲ, ಆದರೆ ಭಗವಂತನ ಪ್ರೇರಣೆಯಿಂದ ನನ್ನ ಮೂಲಕ ಆಗಿದೆ ಅಷ್ಟೇ. ಹಾಗಾಗಿ ದೋಷದ ಪಾಪದ ಯಾವುದೇ ಪ್ರಶ್ನೆ ಏಳುವುದಿಲ್ಲ. ನೀವು ಶಾಂತಚಿತ್ತರಾಗಿ ಆರಾಮವಾಗಿರಿ. ''

ವೈದ್ಯರಾಜರು ಕಣ್ಣುಗಳಲ್ಲಿ ಕಂಬನಿ ತುಂಬಿಕೊಂಡು ನಿಧಾನವಾಗಿ ನಡೆದರು.

ಬೆಳಿಗ್ಗೆ ಸಾಕಷ್ಟು ತಡವಾಗಿಯೇ ಮತ್ತೆ ಭೇಟಿಯಾದಾಗಲೂ ಅವರ ಮುಖ ವೇದನಾಪೂರ್ಣವಾಗಿತ್ತು. ಯಾವುದೋ ದುಗುಡವನ್ನು ಹೊತ್ತಂತೆ. ಆಶ್ಚರ್ಯ.. ಮಾನವ ಹೀಗೂ ಆಗಿಬಿಡುತ್ತಾನಲ್ಲ...

ಮಾರನೇ ದಿನ ಒತ್ತಾಯಪೂರ್ವಕವಾಗಿ ಸಂನ್ಯಾಸಿಯನ್ನು ತಮ್ಮ ಮನೆಗೆ ಕರೆದುಕೊಂಡು ಹೋದರು. ಅವರ ಧರ್ಮಪತ್ನಿಯು ವಿಶೇಷ ಆಗ್ರಹವಿತ್ತು. ಸಂನ್ಯಾಸಿ ಹೋಗಿ ನೋಡುತ್ತಾನೆ.. ಸೀರೆ ಧೋತಿ ಇತ್ಯಾದಿಗಳು ಬಿಸಿಲಿನಲ್ಲಿ ಒಣಗುತ್ತಿವೆ, ಎಲ್ಲಾ ಅಲ್ಲಲ್ಲಿ ಹರಿದು ಗಂಟುಗಳನ್ನು ಹಾಕಿ ಮರ್ಯಾದೆಯನ್ನು ಉಳಿಸುವ ಪ್ರಯತ್ನ ಮಾಡಿದ ಪ್ರತಿಫಲದಂತೆ ಕಾಣುತ್ತಿತ್ತು.

''ವೈದ್ಯರಾಜರೆ, ಇದೇನಿದು? ''

''ರಾತ್ರಿಯಲ್ಲಿ ಮನೆಯಲ್ಲೇ ಇದರಲ್ಲಿ ಉಪಯೋಗವಾಗುತ್ತದೆ. ಬೆಳಗಿನ ಹೊತ್ತಿನಲ್ಲಿ ಹೊರಗೆ ಹೋಗುವಾಗ ಧರಿಸಲು ಎಲ್ಲರಿಗೂ ಒಂದೊಂದು ಒಳ್ಳೆಯ ಜೊತೆ ಬಟ್ಟೆ ಇದೆ. ಇಂದು ಬಜಾರಿನಿಂದ ಖರೀದಿಸಿ ತರುವೆ. ನೀವೇ ಹಣವನ್ನು ಕೊಡಿಸಿದ್ದೀರಲ್ಲ..'' ಅವರ ಕಣ್ಣು ತುಂಬಿ ಬಂದಿತು, ಅವರ ಪತ್ನಿಯ ಕಣ್ಣುಗಳಲ್ಲೂ ಕಂಬನಿ.

ಸಂನ್ಯಾಸಿಯು ನೋಡಿದ ಈ ಸಭ್ಯ ಗೃಹಸ್ಥನ ಮನೆ ಅತ್ಯಂತ ಪವಿತ್ರ ದೇವಾಲಯದಂತೆ. ಸುಂದರ ಸ್ವಚ್ಛ ಸದಭಿರುಚಿಯಿಂದ ಕೂಡಿದ ಮತ್ತು ವ್ಯವಸ್ಥಿತವಾಗಿದ್ದ ಆ ಮನೆ ಕೇವಲ ಮಣ್ಣಿನಿಂದಲೇ ನಿರ್ಮಿತವಾಗಿತ್ತು ಮತ್ತು ಅದರಲ್ಲಿ ಇಂಥ ಒಂದು ಆಧ್ಯಾತ್ಮಿಕ ವಾತಾವರಣ ದೊರಕಿತು... ಅದು ಅಪೂರ್ವವೂ ಅದ್ಭುತವೂ ಆಗಿತ್ತು.